

ಕೀರ್ತಿನಾಥ ಕುರ್ತಕೋಟಿ

# ಇತಿಹಾಸದ ಭಯ

ಗೀಜಗ ತನ್ನ ಗೂಡನ್ನು ಒಂದು ವಿಶಿಷ್ಟವಾದ ಶೈಲಿಯಲ್ಲಿ ಕಟ್ಟುತ್ತದೆ. ನೂರಾರು ಗೂಡುಗಳನ್ನು ಪರೀಕ್ಷಿಸಿ ನೋಡಿದರೂ ಅವೆಲ್ಲ ಒಂದೇ ಗೀಜಗ ಒಂದೇ ಹೊತ್ತಿನಲ್ಲಿ ಕಟ್ಟಿದಂತಿರುತ್ತವೆ. ಅದಕ್ಕೆಂದೇ ನಿಸರ್ಗದಲ್ಲಿ ಹೊಸದೇನೂ ನಡೆಯುವುದಿಲ್ಲ ಎಂಬ ನಂಬಿಕೆ ಈ ಯುಗದಲ್ಲಿ ಪ್ರಚಲಿತವಾಗಿದೆ. ಅದಕ್ಕೆ ವಿರುದ್ಧವಾಗಿ ಮನುಷ್ಯನ ಇತಿಹಾಸದಲ್ಲಿ ಬದಲಾವಣೆಯೇ ಮುಖ್ಯ ನಿಯಮವಾಗಿದೆ. ಸಾವಿರ ವರ್ಷಗಳಿಂದ ಗೀಜಗ ಒಂದೇ ರೀತಿಯಾಗಿ ಗೂಡು ಕಟ್ಟುತ್ತ ಬಂದಿದ್ದರೆ, ಮನುಷ್ಯನ ಮನೆಯ ವಾಸ್ತುರಚನೆ ಬದಲಾಗುತ್ತಲೇ ಇರುತ್ತದೆ.

ಮನುಷ್ಯನ ಇತಿಹಾಸದ ಬಗ್ಗೆ ನಮ್ಮ ಈ ಆಸಕ್ತಿ ತೀರ ಇತ್ತೀಚಿನದಾಗಿದೆ. 'ದೇವರು ಜಗತ್ತನ್ನು ಸೃಷ್ಟಿಸಿದರೆ ಮನುಷ್ಯ ಇತಿಹಾಸವನ್ನು ನಿರ್ಮಿಸಿದ' ಎಂಬಂಥ ಹೇಳಿಕೆಗಳು ಆಧುನಿಕವಾದವುಗಳು. ಅಲ್ಲದೆ ನಿಸರ್ಗ ಮತ್ತು ಇತಿಹಾಸಗಳ ನಡುವಿನ ಮುಖ್ಯವಾದ ಅಂತರವೆಂದರೆ, ಇತಿಹಾಸಕ್ಕೆ ಅರ್ಥವಿರುವಂತೆ ನಿಸರ್ಗಕ್ಕೆ ಅಸ್ತಿತ್ವವಿದೆಯೇ ಹೊರತು ಅರ್ಥವಿಲ್ಲ. ಬೆಳದಿಂಗಳು ಜಗತ್ತನ್ನು ಬೆಳಗಬಹುದು; ಬೆಂದ ಮೈಮನಗಳನ್ನು ತಣಿಸಬಹುದು; ಪ್ರಣಯಕ್ಕೆ ಉದ್ದೀಪನವಾಗಿರಬಹುದು. ಆದರೆ ಈ ಎಲ್ಲ ಅರ್ಥ ಪ್ರಪಂಚ ಮನುಷ್ಯ ನಿರ್ಮಿತವಾದದ್ದೇ ಹೊರತಾಗಿ ಇದೆಲ್ಲವನ್ನೂ ಮಾಡಬೇಕೆಂಬ ಸಂಕಲ್ಪಶಕ್ತಿ ಬೆಳದಿಂಗಳಿಗಿಲ್ಲ.

ಅದೇನೇ ಇದ್ದರೂ ಬದಲಾವಣೆ ಮತ್ತು ಪ್ರಗತಿಶೀಲತೆಗಳು ಇತಿಹಾಸದ ಮುಖ್ಯ ಲಕ್ಷಣಗಳು. ಈ ಸಂಗತಿಯ ಸತ್ಯ ಆಧುನಿಕ ಮನುಷ್ಯನ ಮನಸ್ಸನ್ನೆಲ್ಲ ಆವರಿಸಿಕೊಂಡು ಪ್ರಗತಿಯ ಹೊಸ ತತ್ವವನ್ನು ರೂಢಿಗೆ ತಂದಿದೆ. ಈ ಪ್ರಗತಿಯ ಕೊನೆ ಏನು ಎಂಬುದಕ್ಕೆ ವಿಜ್ಞಾನಿಗಳು, ತತ್ವವೇತ್ತರು ಕೂಡಿಕೊಂಡು ಉತ್ತರ ಕೊಡಬೇಕಾಗಿದೆ. ಪೆಟ್ರೋಲಿಯಂನಿಂದ ಹಿಡಿದು ನಾವು ಉಸಿರಾಡುವ ಗಾಳಿಯವರೆಗೆ ಆವಶ್ಯಕ ವಸ್ತುಗಳೆಲ್ಲ ಇಂದು ಈ ಜಗತ್ತಿನಲ್ಲಿ ತೀರಿಹೋಗುತ್ತವೆ ಎಂಬುದರ ಬಗ್ಗೆ ಅಂಕಿ–ಸಂಖ್ಯೆಗಳು ತಯಾರಾಗತೊಡಗಿವೆ. ನಿಸರ್ಗ ಮತ್ತು ಜೀವನ ಇವು ತಮ್ಮ ಕ್ರಮದಂತೆ ನಿತ್ಯ ಸಾಗುತ್ತಿದ್ದರೂ ಇತಿಹಾಸದ ಭಯದಲ್ಲಿ ಜೀವಿಸಬೇಕಾದ ಪರಿಸ್ಥಿತಿ ಇಂದು ಬಂದೊದಗಿದೆ.